## ಹೊಳೆ ದಾಟಿದ ಮೇಲೆ...

ಶಿವರಾಜಕುಮಾರ್ ಮಾತುಗಳಲ್ಲಿ ಹತಾಶೆಯಿತ್ತು. ಅವರ ನೋವನ್ನು ಹಂಚಿಕೊಳ್ಳುವವರಂತೆ ನಿರ್ದೇಶಕ ಪ್ರೇಮ್ ತಲೆ ಮೇಲೆ ಕೈಹೊತ್ತು ಕುಳಿತರು. ಇಬ್ಬರ ಮಾತುಗಳ ಕೇಂದ್ರದಲ್ಲಿದ್ದುದು 'ಮಾಧ್ಯಮ'ಮಿತ್ರರು.

'ಕನ್ನಡದ ಪತ್ರಕರ್ತರಿಗೆ ಒಂದು ಒಳ್ಳೆಯ ಕನ್ನಡ ಸಿನಿಮಾ ಗೆಲ್ಲುವುದು ಬೇಕಾಗಿಲ್ಲ. ಸಿನಿಮಾ ಚೆನ್ನಾಗಿದ್ದರೂ, ಚಿತ್ರಮಂದಿರಗಳು ತುಂಬಿ ತುಳುಕುತ್ತಿದ್ದರೂ ಸುಳ್ಳು ಸುಳ್ಳೇ ಸುದ್ದಿ ಮಾಡುತ್ತಾರೆ. 'ಜೋಗಯ್ಯ' ಚಿತ್ರದ ವಿರುದ್ಧವಂತೂ ದೊಡ್ಡ ಪ್ರಮಾಣದಲ್ಲಿ ಅಪಪ್ರಚಾರ ನಡೆದಿದೆ. ಶಿವರಾಜಕುಮಾರ್ ಖಾಲಿಯಾಗಿದ್ದಾರೆ ಎಂದು ಒಬ್ಬರು ಬರೆದಿದ್ದಾರೆ. ಇಪ್ಪತ್ತೈದು ವರ್ಷಗಳ ನಂತರ ಈ ರೀತಿಯ ಮಾತು ಕೇಳಬೇಕಾಗಿದೆ. ಇಂಥ ಟೀಕೆಗಳಿಂದಾಗಿ ಸಿನಿಮಾದಿಂದ ದೂರವಿದ್ದು ಬಿಡೋಣ ಎನ್ನಿಸಿಬಿಡುತ್ತದೆ' ಎಂದು ಶಿವರಾಜಕುಮಾರ್ ಬೇಜಾರು ಮಾಡಿಕೊಂಡರು.

ಪ್ರೇಮ್ ಕೂಡ 'ಜೋಗಯ್ಯ'ನ ಬಗ್ಗೆ ಅಪಪ್ರಚಾರ ನಡೆದಿದೆ ಎಂದು ದೂರಿದರು. 'ನಾವು ಥ್ರೀಡಿ ಮಾಡಿದ್ದರೂ ಚಿತ್ರ ಮಂದಿರದವರು ಸಹಕಾರ ನೀಡುತ್ತಿಲ್ಲ. ಸಿನಿಮಾಕ್ಕೆ ಜನ ಹೋಗುತ್ತಿಲ್ಲ ಎಂದು ಕೆಲವು ಪತ್ರಿಕೆಗಳು, ವಾಹಿನಿಗಳು ಸುದ್ದಿ ಮಾಡುತ್ತಿವೆ. ಆದರೆ, ಪ್ರೇಕ್ಷಕರು ಮಾತ್ರ ಜೋಗಯ್ಯನನ್ನು ನೋಡುವುದನ್ನು ಬಿಟ್ಟಿಲ್ಲ. ಜೋಗಯ್ಯ ದೊಡ್ಡ ಪ್ರಮಾಣದ ಗೆಲುವು ಸಾಧಿಸಿದ್ದಾನೆ' ಎಂದರು ಪ್ರೇಮ್.





## 'ಟೀನೇಜ್' ಗಾನಬಜಾನಾ

ಮಾಸ್ಟರ್ ಕಿಶನ್ 'ಟೀನೇಜ್'ಗೆ ಕಾಲಿಟ್ಟಿದ್ದಾರೆ. ಅರ್ಥಾತ್, ಅವರು ನಟಿಸುತ್ತಿರುವ ಹೊಸ ಚಿತ್ರದ ಹೆಸರು 'ಟೀನೇಜ್'. 'ಈ ವಯಸ್ಸೇ ಒಂಥರಾ' ಎನ್ನುವುದು ಚಿತ್ರದ ಅಡಿ ಟಿಪ್ಪಣಿ.

ಕಳೆದ ವಾರ ಬೆಂಗಳೂರಿನ ಎಲೆಕ್ಟ್ರಾನಿಕ್ ಸಿಟಿಗೆ ಸಮೀಪದಲ್ಲಿರುವ 'ಎಬೆನೆಜರ್ ಇಂಟರ್‌ನ್ಯಾಷನಲ್ ಸ್ಕೂಲ್' ಕ್ಯಾಂಪಸ್‌ನಲ್ಲಿ ಟೀನೇಜ್ ಹಕ್ಕಿಗಳ ಕಲರವ. ಈ ಸ್ಥಳಕ್ಕೆ ಮಾಧ್ಯಮ ಮಿತ್ರರು ಭೇಟಿ ಕೊಟ್ಟ ಸಮಯದಲ್ಲಿ, ಕಿಶನ್ ತನ್ನ ಗೆಳೆಯ ಗೆಳತಿಯರೊಂದಿಗೆ ಸ್ಕೂಲ್ ವ್ಯಾನ್‌ನಿಂದ ಇಳಿಯುವ ದೃಶ್ಯವನ್ನು ನಿರ್ದೇಶಕ ಶ್ರೀಕಾಂತ್ ಚಿತ್ರೀಕರಿಸುತ್ತಿದ್ದರು.

'ಇದು ಟೀನೇಜ್ ಹುಡುಗ ಹುಡುಗಿಯರ ಗೊಂದಲದ ಮನಸ್ಥಿತಿಯನ್ನು ಚಿತ್ರಿಸುವ ಸಿನಿಮಾ. ಮುಂದಿನ ಪೀಳಿಗೆಯ ಮನಸ್ಸನ್ನು ಹಿಡಿಯುವ ಈ ಚಿತ್ರಕಥೆ ಅದ್ಭುತವಾಗಿದೆ. ಚಿತ್ರದ ಕೊನೆಯಲ್ಲಿ ಒಂದು ಅಪರೂಪದ ಸಂದೇಶ ಕೂಡ ಇದೆ' ಎಂದರು ಕಿಶನ್. ಅಂದ ಹಾಗೆ, ಸಿನಿಮಾದಲ್ಲಿ ತಲಾ ಮೂರೂವರೆ ನಿಮಿಷದ ಹನ್ನೊಂದು ಹಾಡುಗಳು ಇರಲಿವೆಯಂತೆ. ಹಾಗಾಗಿ, ಇದನ್ನು ಟೀನೇಜ್ ಗಾನಬಜಾನಾ ಎನ್ನಲಿಕ್ಕೆ ಅಡ್ಡಿಯಿಲ್ಲ.



## ಪ್ರಣಯರೂಪಿ ನರಸಿಂಹ!

'ನರಸಿಂಹ' ಚಿತ್ರದ ಗೀತೆಯೊಂದರ ಚಿತ್ರೀಕರಣ. ಸ್ವರ್ಗಕ್ಕೆ ಕಿಚ್ಚಿಡುವಂತೆ ಪ್ರಣಯಿಗಳಿಬ್ಬರ ಉನ್ಮಾದದ ಯುಗಳ. ರವಿಚಂದ್ರನ್ ಮತ್ತು ನಿಕೇಷ ಪಟೇಲ್ ಹೆಜ್ಜೆ ಹಾಕುತ್ತಿದ್ದರೆ ನಿರ್ದೇಶಕ ಮೋಹನ್ ನಿಂತಲ್ಲೇ ಕುಣಿಯುವಂತಿದ್ದರು.

ಮೋಹನ್ ಅವರ ಪ್ರಕಾರ 'ನರಸಿಂಹ' ಚಿತ್ರದಲ್ಲಿ ರವಿಚಂದ್ರನ್ ರಂಗುರಂಗಾಗಿ ಕಾಣಿಸಿಕೊಳ್ಳುತ್ತಿದ್ದಾರೆ. ಅರ್ಥಾತ್ ರವಿಚಂದ್ರನ್ ಅವರಿಗೇ ವಿಶಿಷ್ಟವಾದ ಎಲ್ಲ ಲೀಲೆಗಳೂ ಈ ಸಿನಿಮಾದಲ್ಲಿ ಇರಲಿವೆ. ರವಿಚಂದ್ರನ್ ಮತ್ತು ನಿಕೇಷ ಜೋಡಿ ಚಿತ್ರಕ್ಕೆ ಮಾದಕ ಸ್ಪರ್ಶ ನೀಡಲಿದೆಯಂತೆ. ಹಾಸ್ಯರಸವೂ ಸಿನಿಮಾದಲ್ಲಿ ಸಾಕಷ್ಟಿದೆಯಂತೆ. ಅಂದ ಹಾಗೆ, ಈ ಚಿತ್ರಕ್ಕೆ ಹಂಸಲೇಖಾ ಸಂಗೀತ ನೀಡಿದ್ದು, ಗೀತೆಗಳು ಒಂದಾನೊಂದು ಕಾಲದ ಮಾಧುರ್ಯವನ್ನು ನೆನಪಿಸಲಿವೆಯಂತೆ. ಚಿತ್ರದ ಬಹುತೇಕ ಚಿತ್ರೀಕರಣ ಮುಗಿದಿದ್ದು, ಅಕ್ಟೋಬರ್ ಕೊನೆಯಲ್ಲಿ ಸಿನಿಮಾ ತೆರೆ ಕಾಣಿಸುವುದು ಚಿತ್ರತಂಡದ ಉದ್ದೇಶ.

■ ರಘು